ಶ್ರೀ ಎಸ್. ಬಿ. ನಾಗರಾಳ್.—ಸಾಧ್ಯವಾದಷ್ಟು ಬೇಗ ಸರ್ಕಾರಕ್ಕೆ ವರದಿ ಕಳುಹಿಸುವುದಕ್ಕೆ ಹೇಳುತ್ತೇವೆ.

Forest Land released for Cultivation in North Kanara District

355 SMT RADHA BHATT (Ankola) —

Will the Minister for Revenue be pleased to state:—

(*a*) the extent of land distributed out of the land released for ultivation by the Forest Department in North Kanara District ;

(*b*) out of the lands released by the Forest Department, the extent of land which is fit for cultivation and the exteat of hilly area ; whether the survey has been conducted in this regard ; if so, the result of the same ?

SRI N. HUTCHAMASTHY GOWDA (Minister for Revenue)— .

(*a*) 27 287 acres.

(*b*) 53,841 acres.

An extent of 5,190 acres is hilly area. Survey has not been conducted in this regard. Hence this question does not arise.

ಶ್ರೀಮತಿ ರಾಧಾಭಟ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಗುವಳಿಗಾಗಿ ಹಂಚಿರುವ ಅರಣ್ಯ ಭೂಮಿಯಲ್ಲಿ ಅನೇಕ ಎಕರೆಗಳಷ್ಟು ಪ್ರದೇಶ ಬೀಡಾಗಿದ್ದು, ಸಾಗುವಳಿಗೆ ಉಪಯೋಗವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ, ಸಾಗುವಳಿಗೆ ಉಪಯೋಗವಿಲ್ಲದೇ ಇರುವ ಜಮೀನನ್ನು ಹಿಂದಕ್ಕೆ ತೆಗೆದುಕೊಂಡು ಅದಕ್ಕೆ ಬದಲಾಗಿ ಸಾಗುವಳಿಗೆ ಅನುಕೂಲವಾದ ಜಮೀನನ್ನು ಬಿಡುಗಡೆಮಾಡಲಿಕ್ಕೆ ಯೋಚನೆಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಗುವಳಿಗೆ ಅರ್ಹವಾಗಿಲ್ಲದೇ ಇರುವ ಪ್ರದೇಶ 5190 ಎಕರೆ ಎಂಬುದಾಗಿ ತಿಳಿಸಿದ್ದೇವೆ. ಅವನ್ನು ಬಿಟ್ಟು ಉಳಿದ ಜಮೀನ ಗಳನ್ನು ಯಾವ ರೀತಿಯಾಗಿ ಹಂಚಿರುವುದನ್ನೂ ಸಹ ತಿಳಿಸಿದ್ದೇವೆ. ಈ ಮಾಹೆ 10—12—72ರಲ್ಲಿ ರೆವಿನ್ಯೂ ಇಲಾಖೆಗೆ ಸಲಿಸದೇ ಇರುವ ಜಮೀನನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒಂದು ಸರ್ಕಾರದ ಹುಕುಂ ಆಗಿದೆ. ಆದ್ದರಿಂದ ಇಲ್ಲಿಯವರೆಗೆ ಹಂಚದೇ ಇರುವ ಜಮೀನನ್ನು ಅವರೇ ಹಂಚಬಹುದು ಆದರೆ ಇಲ್ಲಿಯವರೆಗೂ ನಮ್ಮ ಸ್ವಾಧೀನಕ್ಕೆ ಕೊಡದೇ ಇರುವ ಜಮೀನನ್ನು ಹಂಚುವುದಕ್ಕೆ ಸಾಧ್ಯವಿಲ್ಲವೆಂದು ಆರ್ಡರ್ ಆಗಿರುವುದರಿಂದ ಅವರ ಬಗ್ಗೆ ಈಗ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ರಾಧಾಭಟ್.—ಎಲ್ಲಾಪುರ ತಾಲ್ಲೂಕಿನಲ್ಲಿನ ಒಂದು ಗ್ರಾಮದಲ್ಲಿ 100 ಎಕರೆ ಬಿಡುಗಡೆಯಾಗಿದೆ. ಅದರಲ್ಲಿ 12 ಎಕರೆ ಮಾತ್ರ ಸಾಗುವಳಿ ಮಾಡಿದ್ದಾರೆ. ಉಳಿದುದು ಬರೀ ಗುಡ್ಡಗಾಡು ಆಗಿರುವುದರಿಂದ ಅಂತಹ ಜಮೀನನ್ನು ಹಿಂದಕ್ಕೆ ತೆಗೆದುಕೊಂಡು ಸಾಗುವಳಿಗೆ ಯೋಗ್ಯವಾದ ಜಮೀನನ್ನು ಹಂಚುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—19—12—72ರಲ್ಲಿ ಇಲ್ಲಿಯವರೆಗೂ ಮಂಜೂರಾಗಿ ಇನ್ನೂ ನಮ್ಮ ಸ್ವಾಧೀನಕ್ಕೆ ಕೊಡದೇ ಇರುವ ಜಮೀನನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಆರ್ಡರ್ ಆಗಿದೆ. ಆದ್ದರಿಂದ ಈಗ ನಮ್ಮ ಸ್ವಾಧೀನಕ್ಕೆ ಬಂದಿರುವ ಜಮೀನು ಇದ್ದರೆ ಹಂಚುವುದಕ್ಕೆ ಏರ್ಪಾಡುಮಾಡಬಹುದು, ಸ್ವಾಧೀನಕ್ಕೆ ಬಂದಿದ್ದು, ಅದು ಗುಡ್ಡಗಾಡು ಆಗಿದ್ದು, ಹಂಚುವುದಕ್ಕೆ ಆರ್ಹವಾಗಿಲ್ಲ, ವ್ಯವಸಾಯಕ್ಕೆ ಯೋಗ್ಯವಾಗಿಲ್ಲವೆಂದು ಕಂಡುಬಂದರೆ ಮಾತ್ರ ಅವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎ. ಎಂ. ಫಾಡಿ,—(ಅ) ಪ್ರಶ್ನೆಗೆ ಉತ್ತರವಾಗಿ 53,841 ಎಕರೆ, ಸಾಗುವಳಿಗೆ ಅನುಕೂಲವಾಗಿದೆಯೆಂದು ತಿಳಿಸಿದ್ದಿರಿ. ಇಷ್ಟು ಎಕರೆಯನ್ನು ಸಾಗುವಳಿಗೆ ಬಿಟ್ಟರೂ ಅದನ್ನು ಎಷ್ಟು ಜನರಿಗೆ ಹಂಚಿದ್ದೀರಿ? ಅವರು ಏನು ಸಾಗುವಳಿ ಮಾಡಿದ್ದಾರೆ? ಈಗ ಬಹಳವಾಗಿ ಭೂಮಿ ಕೇವಲ ಶ್ರೀಮಂತರಿಗೆ ಹಾಗು ಭೂಮಿ ಇದ್ದವರಿಗೆ ಮಾತ್ರ ಹೋಗುತ್ತಿದೆ. ಆದ್ದರಿಂದ ಅವರ ಬಗ್ಗೆ ವಿಚಾರಮಾಡಿ ಅವರಿಂದ ಭೂಮಿಯನ್ನು ಕಸಿದುಕೊಂಡು ಭೂಹೀನರಿಗೆ ಅದನ್ನು ಕೊಡುತ್ತೀರಾ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಧೀನಕ್ಕೆ ಕೊಟ್ಟಿರುವ ಜಮೀನನ್ನು ಬೇರೆ ಕಾನೂನು ಪ್ರಕಾರ ಕಸಿದುಕೊಳ್ಳಬಹುದು. ಆದರೆ ಮಂಜೂರಾಗಿರುವ ಜಮೀನನ್ನು ಮತ್ತೆ ಆದನ್ನು ಹಿಂದಕ್ಕೆ ಕೊಡುವುದಕ್ಕೆ ಸಾಧ್ಯವಿಲ್ಲ. ಆ ರೀತಿಯಾಗಿ ಹೇಳುವುದು ಬಹಳ ಕಷ್ಟವಾಗುತ್ತದೆ.

ಶ್ರೀಮತಿ ರಾಧಾಭಟ್.—ಹಾಗಾದರೆ ಬೇರೆ ಕಾನೂನು ಮಾಡಿ ಕಸಿದುಕೊಳ್ಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾನೂನು ಉಪಯೋಗ ಖಾತರಿ ಆಗಿದಿದೆ. ಅದು ಕಾನೂನಿನ ಒಳಗೆ ಒಳಪಡುವುದಾದರೆ ಅವನ್ನು ಯಾವ ರೀತಿಯಲ್ಲಿ ಹಿಂದಕ್ಕೆ ಪಡೆಯಬೇಕೆಂಬುದನ್ನು ಯೋಚನೆಮಾಡಬೇಕಾಗುತ್ತದೆ.

ಶ್ರೀಮತಿ ರಾಧಾಭಟ್.—ಅರಣ್ಯ ಖಾತೆಯವರು ಬಡುಗಡೆ ಮಾಡಿ ಸಾಗುವಳಿಗೆ ಅನುಕೂಲವಾದ ಜಮೀನನ್ನು ಹಂಚುವ ಯೋಚನೆ ಸರ್ಕಾರಕ್ಕೆ ಇದೆಯೇ ಅಥವಾ ಈಗಾಗಲೇ ಬಿಡುಗಡೆಮಾಡಿದ ಅರಣ್ಯ ಭೂಮಿಯನ್ನು ಬೇರೆ ಯಾವುದಾದರೂ ಉದ್ದೇಶಕ್ಕೆ ಉಪಯೋಗಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರುವ ಹಾಗೆ ನನ್ನ ಮುಂದೆ ಇರತಕ್ಕಂಥ ವರದಿ ಪ್ರಕಾರ ಬೇರೆ ಇಟ್ಟುಕೊಂಡ ಹಾಗೆ ಕಾಣುವುದಿದಿಲ್ಲ. ಇಲ್ಲಿಂ ವರೆಗೆ ಯಾವುದೂ ಖಾತೆಗೆ ಕೊಟ್ಟು ವ್ಯವಸಾಯಕ್ಕೆ ಹಂಡದೆ ಇರುವುದು ಇದ್ದರೆ ಅದಕ್ಕೆ ಒಂದು ಕಾಲಮಿತಿ ಹಾಕಿದ್ದೇವೆ. ಆ ರೀತಿ ಏನಾದರೂ ನಿಧಾನವಾಗಿದ್ದರೆ ಅದಕ್ಕೆ ವ್ಯವಸ್ಥೆ ಮಾಡುತ್ತೇನೆ.

Staff for Land Grant Tribunals

402. SRI A. K. ANWAR (Bhadravathi).—

Will the Minister for Revenue be pleased to state:—

(*a*) whether Land Grant Tribunals are provided with adequate staff in the State, partscularly in Shimoga District ;

(*b*) if so, the progress made in each District and Taluks and the extent of land distributed so far ;

(*c*) whether the unanthorisedly cultivated revenue lands, gomals, bechirag villages come under the purview of the Land Tribunals ;

(*d*) if not, how these lands are to be disbursed to the tiller ;

(*e*) if so, why these lands are not regularised and the extent of lands regularised by Land Grant Committees ;

(*f*) the extent of lands under unauthorised cultivation in Shimoga District. Talukwise figures with Committee's recommendation (Talukwise figuses may be furnished) ;

(*g*) since how long they are under unauthorised cultivation and the extent of loss of revenue to the State, in Shimoga District (Talukwise figures may be furnished)?